KARNATAKA LEGISLATIVE ASSEMBLY RESEARCH AND REFERENCE SECTION
PAPER CLIPPINGS
DEPARTMENT / SUBJECT:
NAME OF THE NEWS PAPER:
DATE: 10/11/2019

**ತೀರ್ಪಿನ ವಿಶೇಷ** ಅಯೋಧ್ಯೆ ರಾಮಜನ್ಮಭೂಮಿ–ಬಾಬ್ರಿ ಮಸೀದಿ ಭೂವಿವಾದ ಕುರಿತ ಸುಪ್ರೀಂಕೋರ್ಟ್ ತೀರ್ಪಿನ 2 ಮಹತ್ವದ ಸಂಗತಿಗಳು

# 5-0: ಸುಪ್ರೀಂ ನ್ಯಾಯಾಧೀಶರಿಂದ ಅಪರೂಪದ ಸರ್ವಾನುಮತ ತೀರ್ಪು



ನವದೆಹಲಿ: ಅಯೋಧ್ಯೆ ರಾಮಜನ್ಮ ಭೂಮಿ- ಬಾಬ್ರಿ ಮಸೀದಿ ವಿವಾದದ ಕುರಿತು ಸರ್ವೋಚ್ಚ ನ್ಯಾಯಾಲಯ ಸರ್ವಾನುಮತದ ತೀರ್ಪು ಪ್ರಕಟಿಸಿದ್ದು ವಿಶೇಷ. ಇಂತಹ ಸೂಕ್ಷ್ಮ ಪ್ರಕರಣಗಳ ವಿಚಾರಣೆ ಸಂದರ್ಭದಲ್ಲಿ ನ್ಯಾಯಾಧೀಶರ ನಡುವೆ ಭಿನ್ನಾಭಿಪ್ರಾಯ ಮೂಡಿ ಭಿನ್ನ ತೀರ್ಪು ಬರಬಹುದು. ಆದರೆ ಅಪರೂಪಕ್ಕೆಂಬಂತೆ ಮುಖ್ಯ ನ್ಯಾಯಾಧೀಶ ನ್ಯಾ| ರಂಜನ್ ಗೊಗೋಯ್, ನ್ಯಾ| ಎಸ್.ಎ. ಬೋಬ್ಡೆ, ನ್ಯಾ| ಡಿ.ವೈ. ಚಂದ್ರಚೂಡ, ನ್ಯಾ| ಅಶೋಕ್ ಭೂಷಣ್ ಹಾಗೂ ನ್ಯಾ| ಅಬ್ದುಲ್ ನಜೀರ್ ಅವರ ಪೀಠ, ಒಮ್ಮತದ ಆದೇಶ ಪ್ರಕಟ ಮಾಡಿತು. 'ಇದೇ ಸ್ಥಳದಲ್ಲೇ ರಾಮನು ಜನಿಸಿದ್ದನೇ?' ಎಂದು ನ್ಯಾಯಾಧೀಶರೊಬ್ಬರು ಶಂಕಿಸಿದ್ದರು ಎಂಬ ಅಂಶವನ್ನು ತೀರ್ಪಿನಲ್ಲಿ ಪ್ರಸ್ತಾಪಿಸಿದ್ದನ್ನು ಬಿಟ್ಟರೆ ಸಮಗ್ರ ತೀರ್ಪು ಸರ್ವಾನುಮತದ್ದಾಗಿದೆ.

# ಅಯೋಧ್ಯೆ ತೀರ್ಪಿಗೆ ಎಲ್ಲರ ಸ್ವಾಗತ, ದೇಶಾದ್ಯಂತ ಪರಿಸ್ಥಿತಿ ಶಾಂತಿಯುತ



ನವದೆಹಲಿ: ರಾಮಜನ್ಮಭೂಮಿ ತೀರ್ಪಿಗೆ ದೇಶಾದ್ಯಂತ ಸಾರ್ವತ್ರಿಕ ಸ್ವಾಗತ ವ್ಯಕ್ತವಾಗಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಪ್ರತಿಪಕ್ಷಗಳ ಮುಖಂಡರು ಪಕ್ಷಭೇದ ಮರೆತು ತೀರ್ಪನ್ನು ಸ್ವಾಗತಿಸಿ ಜನರು ಶಾಂತಿ- ಸೌಹಾರ್ದ ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ. ಕೆಲವೇ ಕೆಲವು ಪಕ್ಷಗಳು ಹಾಗೂ ಸಂಘಟನೆಗಳು ತೀರ್ಪಿಗೆ ಆಕ್ಷೇಪಿಸಿವೆ. ಈ ನಡುವೆ, ತೀರ್ಪು ಹೊರಬರುವ ಮುನ್ಸೂಚನೆ ಇದ್ದ ಕಾರಣ ಮೊದಲೇ ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳು ಮುನ್ನೆಚ್ಚರಿಕೆ ಕ್ರಮಗಳು ಹಾಗೂ ವ್ಯಾಪಕ ಭದ್ರತಾ ವ್ಯವಸ್ಥೆ ಕೈಗೊಂಡಿದ್ದವು. ಹೀಗಾಗಿ ದೇಶದ ಎಲ್ಲೂ ಅಹಿತಕರ ಘಟನೆಗಳು, ಹಿಂಸಾಚಾರ ನಡೆದ ವರದಿ ಬಂದಿಲ್ಲ.